"ನೀನು ನಂಗೆ ಬೆಣ್ಣೆ ಹಚ್ಚೋದೇನು ಬೇಕಾಗಿಲ್ಲ..." ಹೇಳಿದಳು ಶ್ರಾವಂತಿ.

"ಅಲ್ವೇ, ನಮ್ಮಿಬ್ಬರ ಸಂಬಂಧದಲ್ಲಿ ಅಂತಾದ್ದೇನು ಹುಳುಕು ಕಂಡ್ತು ನಿಂಗೆ? ಅವಳು ನನ್ನ ತಂಗಿ ಸಮಾನ. ಸಮಾನ ಏನು, ತಂಗೀನೇ ಅಂತ ನಾನು ಅಂದ್ಕೊಂಡಿದೀನಿ..."

"ಆ ಅರ್ಥದಲ್ಲಿ ಹೇಳ್ಲಿಲ್ಲ ನಾನು. ಅವಳನ್ನ ಮದುವೆ ಆಗಿದ್ರೆ ಇನ್ನಷ್ಟು ಸುಖವಾಗಿರ್ತಿದ್ದಿ, ನಿನ್ನ ಮೆಂಟಾಲಿಟಿಗೆ ಅವಳು ತಕ್ಕ ಜೋಡಿ ಅಂದೆ, ಅಷ್ಟೇ..."

"ಅವಳು ನನ್ನ ತಂಗಿ ಇದ್ದಾಗೆ ಅನ್ಲಿಲ್ವಾ? ಕನ್ನಡ ಬರಲ್ವಾ ನಿಂಗೆ?"

"ನೀನು ಏನೇ ಹೇಳು, ಈ ಮನೇಲಿ ನೀನು ಅವಳಿಗೆ ಕೊಡೋ ಸಲಿಗೆ ಹೆಚ್ಚಾಯ್ತು."

"ಹೊಟ್ಟೆಕಿಚ್ಚಾಗ್ತಿದೆಯಾ ನಿಂಗೆ?"

"ನಂಗ್ಯಾಕೆ ಹೊಟ್ಟೆಕಿಚ್ಚು? ಆದ್ರೂ ಇದೆಲ್ಲಾ ಅತಿರೇಕ ಅನ್ಸುತ್ತೆ..."

"ಒಂದು ಮಾತು ಕೇಳ್ತೀನಿ, ಆತ್ಮಸಾಕ್ಷಿಯಾಗಿ ಉತ್ತರ ಕೊಡ್ತೀಯಾ?"

"ದೊಡ್ಡ ದೊಡ್ಡ ಪದ ಹಾಕ್ಬೇಡ ನೀನು. ನಂಗೆ ಇಷ್ಟ ಆಗಲ್ಲ. ನಾನು ಯಾವತ್ತೂ ಸುಳ್ಳು ಹೇಳಿದೋಳಲ್ಲ. ಅಂತಾ ಅಗತ್ಯ ನಂಗೆ ಬಂದಿಲ್ಲ..."

"ಹಾಗಿದ್ರೆ ಹೇಳು ಶ್ರಾವಂತಿ, ಮನುಷ್ಯರಿಗೆ ಜೀವನದಲ್ಲಿ ಅತಿ ಮುಖ್ಯವಾಗಿ ಬೇಕಾಗಿರೋದು ಏನು? ಆಹಾರ, ನೀರು, ಗಾಳಿ ಅಂತ ಸವಕಲಾಗಿರೋ ಉತ್ತರ ಬೇಡ..."

"....."

"ನಾನೇ ಹೇಳ್ಲಾ? ಪ್ರೀತಿ ಕಣೇ. ಅದೊಂದು ಸಿಗ್ಲಿಲ್ಲ ಅಂತಾದ್ರೆ ಮನುಷ್ಯ ಇದ್ದೂ ಸತ್ತ ಹಾಗೆ. ನೀನು ಇದೀಯಾ, ಸತ್ತಿದೀಯಾ, ಉಂಡೆಯಾ, ಬಿಟ್ಟೆಯಾ ಅಂತ ಕೇಳೋರಿಲ್ಲದಿದ್ರೆ ಅಂತಾ ಬದುಕು ಹ್ಯಾಗಿರುತ್ತೆ ಹೇಳು..."

"....."

"ಉದಾಹರಣೆಗೆ ನಿನ್ನನ್ನೇ ತಗೋ. ನಿನ್ನ ಅಸ್ತಿತ್ವಕ್ಕೆ ಬೆಲೆಯೇ ಇಲ್ಲ ಅನ್ನೋ ಹಾಗೆ ನಾನು ನಡ್ಕೊತಿದ್ರೆ ನಿಂಗೆ ಹ್ಯಾಗನ್ಸುತ್ತೆ ಹೇಳು..."

"ಅದೇನು ಹೇಳ್ಬೇಕೂಂತಿದೀಯೋ ಬಿಡಿಸಿ ಹೇಳು..."

"ಹೇಳೋಕೆ ಏನಿದೆ? ಅದೊಂದು ದುರದೃಷ್ಟದ ಹುಡುಗಿ. ಸಣ್ಣವಳಿದ್ದಾಗ ಅಮ್ಮನಿಂದ ಸಿಕ್ಕಿದ ಪ್ರೀತಿಯೇ ಪ್ರೀತಿ. ಗಂಡನ ಮನೇಲಿ ಅವಳೊಬ್ಬ ಪುಗಸಟ್ಟೆ ದುಡಿಯೋ ಆಳು..."

"ಅವಳ ಗಂಡನಿಗೆ ಗೊತ್ತಾಗಲ್ವಾ ಇದೆಲ್ಲಾ?"

ನಕುಲ ಮಾತಾಡಲು ಯಾಕೋ ಹಿಂದೆಗೆದವನಂತೆ ಕಂಡ. ಕ್ಷಣದ ನಂತರ ನಿಧಾನವಾಗಿ ಹೇಳಿದ,

"ಇದೆಲ್ಲಾ ನಾನು ಹೇಳ್ಬಾರ್ದು. ಅವಳ ಗಂಡ ಸರಿ ಇದ್ದಿದ್ರೆ ಅವಳ್ಯಾಕೆ ಹೀಗಿರ್ಬೇಕಿತ್ತು? ಇಲ್ಲಿದ್ದಷ್ಟು ದಿನ ಒಂದಿನ ಆದ್ರೂ ಅವನು ಫೋನ್ ಮಾಡಿದ್ದು ನೋಡಿದೀಯಾ?"

"ಅಂತವನನ್ನ ಕಟ್ಕೊಂಡು ಗುದ್ದಾಡೋದ್ಯಾಕೆ? ಡೈವೋರ್ಸ್ ಕೊಟ್ಟು ದೂರ ಇರೋದಪ್ಪಾ..."

"ಹೇಳಿದಷ್ಟು ಸಲೀಸು ಅಂದ್ಕೊಂಡಿದೀಯಾ? ಅವಳೇನು ನಿನ್ನ ಹಾಗೆ ದುಡಿಯೋ ಯೋಗ್ಯತೆ ಇರೋಳಾ? ಮಗನ ಭವಿಷ್ಯಾನೂ ನೋಡ್ಬೇಕಲ್ಲ? 'ಬೇರೆ ವಿಧಿ ಇಲ್ಲದೆ' ಅಂತ ಇಂತಾದ್ದನ್ನೆಲ್ಲಾ ಸಹಿಸ್ಕೊಂಡಿರೋರು ಎಷ್ಟು ಜನ ಇದಾರೋ?"

"ಈ ಕಾಲದಲ್ಲೂ?"